ರೂಪಾಯಿಗಳ ಪ್ರಕಾರ ಕೊಟ್ಟು. ಬೆಳೆಯನ್ನು ಬೆಳೆಯುವುದಕ್ಕೆ ರೈತರು ಏನು ಖರ್ಚು ಮಾಡಿರುತ್ತಾರೋ ಅದಕ್ಕಿಂತ ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳುವುದಕ್ಕಾಗಲಿಲ್ಲ ಎನ್ನುವ ವಿಷಯವನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಆ ರೀತಿ ಒಪ್ಪಿಕೊಂಡರೆ ಏನು ಪ್ರಯೋಜನ ? ನ್ಯಾಯವಾದ ಬೆಲೆ ರೈತರುಗಳಿಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಸಾಕು. ನಿಮಗೆ ಮೂರು ಸಾರಿ ಅವಕಾಶ ಕೊಟ್ಟಿದೆ ನೆ. ಇನ್ನು ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾನ್ಯ ಸುಮಾ ವಸಂತರವರ ಪ್ರಶ್ನೆ.

ಕಪ್ಪು ಹಲಗೆ ಕಾರ್ಯಕ್ರಮ

೪೨೩. ಶ್ರೀಮತಿ ಸುಮ ವಸಂತ (ವಿರಾಜ ಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಪ್ಪು ಹಲಗೆ ಕಾರ್ಯಕ್ರಮವನ್ನು ಕೈಗೊಂಡ ಶಾಲೆಗಳೆಷ್ಟು ?

(ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಇಲ್ಲಿಯವರೆಗೆ ಇದಕ್ಕೆ ವೆಚ್ಚವಾದ ಹಣ ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೨೪೭೩.

(ಅನುಬಂಧ ನೋಡುವುದು).

ಆ) ೨೨೬.೬೪ ಲಕ್ಷ ರೂ.

ಅನುಬಂಧ

೧	ಬೆಂಗಳೂರು ಜಿಲ್ಲೆ	ದೇವನಹಳ್ಳಿ	೧೧೭
೨	ಕೋಲಾರ	ಮಾಲೂರು	೧೭೧
೩	ತುಮಕೂರು	ಪಾವಗಡ	೧೫೫
೪	ಶಿವಮೊಗ್ಗ	ಹೊನ್ನಾಳಿ	೧೦೫
೫	ಚಿತ್ರದುರ್ಗ	ಚಳ್ಳಕೆರೆ	೧೫೪
೬	ಮೈಸೂರು	ಚಾಮರಾಜನಗರ	೧೫೬
೭	ಮಂಡ್ಯ	ಮಳವಳ್ಳಿ	೯೦
೮	ಕೊಡಗು	ಸೋಮವಾರಪೇಟೆ	೭೨
೯	ದಕ್ಷಿಣ ಕನ್ನಡ	ಕುಂದಾಪುರ	೧೪೫
೧೦	ಹಾಸನ	ಹೊಳೇನರಸೀಪುರ	೧೫೨
೧೧	ಚಿಕ್ಕಮಗಳೂರು	ಮೂಡಿಗೆರೆ	೧೧೭
೧೨	ಬೆಳಗಾಂ	ಗೋಕಾಕ್	೧೨೭
೧೩	ಬಿಜಾಪುರ	ಇಂಡಿ	೧೫೧
೧೪	ಧಾರವಾಡ	ಮುಂಡರಗಿ	೩೬
೧೫	ಉತ್ತರ ಕನ್ನಡ	ಸೂಪ	೭೫
೧೬	ಗುಲ್ಬರ್ಗಾ	ಶಹಪೂರ	೧೪೫
೧೭	ರಾಯಚೂರು	ಮಾನ್ವಿ	೧೩೨
೧೮	ಬೀದರ್	ಔರಾದ್	೨೧೪
೧೯	ಬಳ್ಳಾರಿ	ಸಿರಪನಹಳ್ಳಿ	೧೬೧
			೨೪೭೩

ಶ್ರೀಮತಿ ಸುಮಾ ವಸಂತ್.— ಮಾನ್ಯ ಅಧ್ಯಕ್ಷರೇ, ಈ ಯೋಜನೆಯು ಎಷ್ಟು ವರ್ಷಗಳಿಂದ ಜಾರಿಯಲ್ಲಿದೆ ಮತ್ತು ಈ ಯೋಜನೆಯ ಮೂಲ ಉದ್ದೇಶವೇನು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್,— ಮಾನ್ಯ ಅಧ್ಯಕ್ಷರೇ, ಈ ಯೋಜನೆಯು ಪಂಚ ವಾರ್ಷಿಕ ಯೋಜನೆಯಂಡಿಯಲ್ಲಿ ಪ್ರಾರಂಭವಾಗಿರತಕ್ಕಂತಾದ್ದು. ೧೯೮೫–೮೬ ರಲ್ಲಿ ಈ ಯೋಜನೆ ಪ್ರಾರಂಭವಾದರೂ ಕಾರ್ಯಗತವಾಗಿದ್ದು ೧೯೮೭–೮೮ ರಲ್ಲಿ. ೧೯೮೭–೮೮ ರಲ್ಲಿ ಕಾರ್ಯಗತವಾದರೂ ಆಗ್ಗ ಹಣ ಬಂದಿರಲಿಲ್ಲ. ೧೯೮೮–೮೯ರಲ್ಲಿ ಈ ಯೋಜನೆಗೆ ಹಣಬಂದಿತ್ತು ಅದನ್ನು ಖರ್ಚು ಮಾಡಲಾಗಿದೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೇ, ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಕಪ್ಪು ಹಲಗೆ ಯೋಜನೆಯಲ್ಲಿ ಬೀದರ್‌ನಲ್ಲಿ ಆಗುತ್ತಿರುವ ಘಟನೆ ಬಗ್ಗೆ ವಿವರಗಳು ಬಂದಿದೆ. ''ಪುಸ್ತಕ ಖರೀದಿ'' ಎಂಬ ಶಿರೋನಾಮೆಯಲ್ಲಿ ಬಂದಿದೆ. ಜಿಲ್ಲಾ ಪರಿಷತ್ ಇನ್ನೂ ಯಾವ ಕ್ರಮ ವನ್ನೂ ಇದರ ಬಗ್ಗೆ ತೆಗದುಕೊಂಡಿಲ್ಲ ಎಂದು ತಿಳಿದು ಬಂದಿದೆ ೧೯೮೮ರಲ್ಲಿ ಈ ಕಪ್ಪು ಹಲಗೆ ಯೋಜನೆಗೆ ಮಂಜೂರಾದ ೪.೬೯ ಲಕ್ಷ ರೂಪಾಯಿಗಳಲ್ಲಿ ೨–೫ ಲಕ್ಷ ರೂಪಾಯಿಗಳಷ್ಟು ಹಣ ೧೧೪ ಶಾಲೆಗಳಿಗೆ ಖರ್ಚಾಗಿದೆ. ೪ ಲಕ್ಷ ೬೯ ಸಾವಿರದಲ್ಲಿ ಭಾಗಶ: ಕಾರ್ಯಾಚರಣೆಗೆ ಬಂದಿದೆ, ಆಡಳಿತಗಾರರು ಚುನಾಯಿತ ಪ್ರತಿನಿಧಿಗಳು ಇದರ ಬಗ್ಗೆ ನಿರಾಸಕ್ತಿ ತೋರುತ್ತಿದ್ದಾರೆ ಎಂದು ವರದಿ ಬಂದಿದೆ. ಕೇಂದ್ರ ಸರ್ಕಾರದಿಂದ ದುಡ್ಡು ಬಂದಿಲ್ಲ ಎಂದು ಟಾಪ್‌ನಲ್ಲಿ ಕಂಳಿತು ಇವರು ಹೇಳುತ್ತಿದ್ದಾರೆ, ಆದರೆ ಬಂದಿರುವ ದುಡ್ಡು ಪೂರ್ತಿಯಾಗಿ ಖರ್ಚು ಮಾಡದೆ ಇರುವ ಘಟನೆಗಳೂ ಇವೆ. ಒಂದು ಕಡೆ ಕೊಟ್ಟಿರುವ ದುಡ್ಡನ್ನು ಪೂರ್ತಿಯಾಗಿ ಖರ್ಚು ಮಾಡದೇ ಇರುವುದೂ ಇದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರಾಥಮಿಕ ಶಿಕ್ಷಣ ಮಂತ್ರಿಗಳು).— ಮಾಜೂರಾದ ಹಣದಲ್ಲಿ ನಾನು ವಿವರವಾದ ಉತ್ತರವನ್ನು ಕೊಡುವುದಕ್ಕೆ ಬಯಸುತ್ತೇನೆ. ಶಿಕ್ಷಕರ ವೇತಕ್ಕಾಗಿ ಖರ್ಚು ಆಗಿರುವುದು ೧೬೩.೧ ಲಕ್ಷ ರೂಪಾಯಿಗಳು. ಯೋಜನೆಯಲ್ಲಿ ಇರುವುದು ೧೮೩.೧೧ ಲಕ್ಷ ರೂಪಾಯಿ. ಬಾಕಿ ಯಾವುದೂ ಉಳಿದಿಲ್ಲ. ಪೀಠೋಪಕರಣಗಳಿಗೆ ೧೩.೪೨ ಲಕ್ಷ ರೂಪಾಯಿ ಖರ್ಚು ಆಗಿದೆ, ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ೬೯೪.೭೧ ಲಕ್ಷ ರೂಪಾಯಿ ಯೋಜನೆಯಲ್ಲಿ ೬೩.೫೧ ಲಕ್ಷ ರೂಪಾಯಿಗಳು ಖರ್ಚು ಆಗಿದೆ. ಮುಂದಿನ ಮಾರ್ಚ್ ೩೧ ರೊಳಗಾಗಿ ಸಂಪೂರ್ಣವಾಗಿ ಹಣವನ್ನು ಖರ್ಚು ಮಾಡಲಾಗುವುದು.

ಶ್ರೀಮತಿ ಸುಮಾ ವಸಂತ್.— ಈ ಯೋಜನೆಯ ಬಗ್ಗೆ ಆಸಕ್ತಿ ಇಲ್ಲವೆಂದು, ತೋರುತ್ತದೆ. ಉಪಾಧ್ಯಾಯರುಗಳಿಗೆ ಸಂಬಳ ಕೊಟ್ಟಿಲ್ಲ. ಆಲ್ಲಿ ಯಾವ ರೀತಿ ಉಪಾಧ್ಯಾಯರನ್ನು ನೇಮಿಸಿಕೊಂಡಿದ್ದಾರೆಂದು ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಕಪ್ಪು ಹಲಗೆ ಯೋಜನೆಯಲ್ಲಿ ಯಾವ ಉಪಾಧ್ಯಾಯರ ಸಂಬಳ ಕೊಡದೇ ನಿಂತಿಲ್ಲ, ವೇತನ ಕೊಡುತ್ತಾ ಬಂದಿದ್ದೇವೆ.

ಮೃಗಾಲಯ ಪ್ರಾಧಿಕಾರವನ್ನು ರಚಿಸಿರುವ ಬಗ್ಗೆ

೩೩೦. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೃಗಾಲಯ ಪ್ರಾಧಿಕಾರವನ್ನು ಯಾವಾಗ ರಚಿಸಲಾಯಿತು, ಅದರ ಅವಧಿ ನಿಗಧಿಯಾಗಿದೆಯೇ; ಹಾಗೂ ಅದರ ಪುನರ್‌ರಚನೆ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಕರ್ನಾಟಕ ಮೃಗಾಲಯ ಪ್ರಾಧಿಕಾರವು ದಿನಾಂಕ ೮–೧–೭೯ ರಂದು ರಚನೆಯಾಯಿತು. ಈ ಪ್ರಾಧಿಕಾರಕ್ಕೆ ನಿಗದಿತ ಅವಧಿಯೂ ಇರುವುದಿಲ್ಲ. ಇದರ ಪುನರ್‌ರಚನೆ ಬಗ್ಗೆ, ಪರಿಶೀಲಿಸಲಾಗುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೇ, ಈ ಪ್ರಾಧಿಕಾರವನ್ನು ಸ್ಥಾಪಿಸಿ ೧೦ ವರ್ಷ ೨ ತಿಂಗಳಾಯಿತು ಇಷ್ಟು ದೀರ್ಘ ಕಾಲವಾದರೂ ಬದಲಾವಣೆ ಮಾಡುವ ಯೋಚನೆ ಇಲ್ಲ. ಸಾರ್ವಜನಿಕರಿಗೆ ಅವಕಾಶವನ್ನು ಕೊಡುವ ಯೋಜನೆ ಸರ್ಕಾರ ಇದುವರೆಗೆ ಮಾಡಲಿಲ್ಲ. ಇದೇ ಪ್ರಶ್ನೆಯನ್ನು ಅನೇಕ ಸಲ ಕೇಳಿದ್ದು ಆಗಿದೆ. ಆದಷ್ಟು ಬೇಗ ಮಾಡಲಿಕ್ಕೆ ತಯಾರು ಇದ್ದೇವೆಂದು ಹೇಳಿದರೂ ಇಲ್ಲಿಯವರೆಗೆ ಮಾಡಲಿಲ್ಲ, ಇದಕ್ಕೆ ಕಾರಣ ಏನು ಎಂದು ಹೇಳಬೇಕು. ಎರಡನೆಯದಾಗಿ ಇಲ್ಲಿ ಒಂದು ಹೋಟೆಲ್ ನಡೆಸುತ್ತಿದ್ದಾರೆ. ಇವರು ಸುಮಾರು ೧೬ ವರ್ಷಗಳಿಂದ ನಡೆಸುತ್ತಿದ್ದಾರೆ. ಈಗ ಕೊಡು